**ದಿನಾಂಕಃ 29.10.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ 1 ನೇ ಎದುರುದಾರರ ಪರ ವಕೀಲರಿಂದಃ**

1 ನೇ ಪ್ರತಿವಾದಿ ಸಲ್ಲಿಸಿರುವ ಲಿಖಿತ ವಾದ ಪತ್ರವನ್ನು ಓದಿ ತಿಳಿದುಕೊಂಡಿರುತ್ತೇನೆ. ನಾನು ರಸ್ತೆ ನಿಯಮಾವಳಿಗಳನ್ನು ಪಾಲಿಸದೆ ಸಿಗ್ನಲ್ ಇಲ್ಲದಿದ್ದರೂ ಸಹ ಚಾಲನೆ ಮಾಡಿದ ಕಾರಣ ಅಪಘಾತವಾಗಿರುತ್ತದೆ ಎಂದರೆ ಸರಿಯಲ್ಲ. ನಿಮ್ಮ ನಿರ್ಲಕ್ಷ್ಯತನದಿಂದಲೇ ಅಘಾತವಾಗಿರುತ್ತದೆ ಎಂದರೆ ಸರಿಯಲ್ಲ. 1 ನೇ ಎದುರುದಾರರ ವಕೀಲರಾಗಿದ್ದು, ಅವರು ಅಪಘಾತವಾದ ತಕ್ಷಣ ನಿಮ್ಮನ್ನು ಸೆಂಟ್ ಮಾರ್ಥಾಸ್ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಚಿಕಿತ್ಸೆ ಕೊಡಿಸಿದರು ಎಂದರೆ ಸರಿ. ಸೆಂಟ್ ಮಾರ್ಥಾಸ್ ಆಸ್ಪತ್ರೆಯಲ್ಲಿ ವೈದ್ಯರು ನಿಮಗೆ ಸಾಮಾನ್ಯ ಸ್ವರೂಪದ ಗಾಯಗಳಾಗಿವೆ ಎಂದು ತಿಳಿಸಿದ್ದರು ಎಂದರೆ ಸರಿಯಲ್ಲ, ಸಾಕ್ಷಿ ಮುಂದುವರೆದು ವೈದ್ಯರ ಸಲಹೆಯ ಮೇರೆಗೆ ಹೆಚ್ಚಿನ ಚಿಕಿತ್ಸೆಗಾಗಿ ಸೆಂಟ್ ಜಾನ್ ಆಸ್ಪತ್ರೆಗೆ ದಾಖಲಾದೆನು. ಹೆಚ್ಚಿನ ಚಿಕಿತ್ಸೆಗಾಗಿ ವೈದ್ಯರು ಸಲಹೆ ನೀಡಿರುವ ಬಗ್ಗೆ ದಾಖಲೆಗಳನ್ನು ಹಾಜರುಪಡಿಸಿದ್ದೀರಾ ಎಂದರೆ ಹಾಜರುಪಡಿಸಿರುತ್ತೇನೆ ಎಂದು ನುಡಿಯುತ್ತಾರೆ. ಸೆಂಟ್ ಮಾರ್ಥಾಸ್ ಆಸ್ಪತ್ರೆ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯಾಗಿರುತ್ತದೆ ಎಂದರೆ ಸರಿ.

**2.** ನಿ.ಪಿ.14 ಮತ್ತು 16 ರ ದಾಖಲೆಗಳಲ್ಲಿ ಸಾಮಾನ್ಯ ಸ್ವರೂಪದ ಗಾಯಗಳು ಎಂದು ನಮೂದಿಸಿದ್ದಾರೆ ಎಂದರೆ ಸರಿಯಲ್ಲ. ನಿ.ಪಿ.14 ಮತ್ತು 16 ರಲ್ಲಿ ನಾರ್ಮಲ್ ಎಂದು ನಮೂದಿಸಿರುವುದು ಸರಿಯಾಗಿದೆಯೋ ಇಲ್ಲವೋ ಎಂದರೆ ಸರಿಯಾಗಿರುವುದಿಲ್ಲ ಎಂದು ನುಡಿಯುತ್ತಾರೆ, ಸಾಕ್ಷಿ ಮುಂದುವರೆದು ನಿ.ಪಿ.14 ಮತ್ತು 16 ರ ದಾಖಲೆಗಳು ಸರಿಯಾಗಿರುತ್ತವೆ ಎಂದು ನುಡಿಯುತ್ತಾರೆ. ನಿಮಗೆ ಸಾಮಾನ್ಯ ಸ್ವರೂಪದ ಗಾಯಗಳು ಉಂಟಾಗಿರುವುದರಿಂದ ಅಪಘಾತವಾದ ದಿನವೇ ನಿಮ್ಮನ್ನು ಆಸ್ಪತ್ರೆಯಿಂದ ಬಿಡುಗಡೆ

ಮಾಡಿರುತ್ತಾರೆ ಎಂದರೆ ಸಾಕ್ಷಿಯು ಮರುದಿನವೇ ಬಿಡುಗಡೆಗೊಳಿಸಿದರು, ಆದರೆ ಮೂರು ವಾರ ಅಥವಾ ಒಂದು ತಿಂಗಳ ನಂತರ ಪುನಃ ಚಿಕಿತ್ಸೆ ಪಡೆಯಬೇಕು ಎಂದು ತಿಳಿಸಿರುತ್ತಾರೆ ಎಂದು ನುಡಿಯುತ್ತಾರೆ. ನಿ.ಪಿ.20 ಡಿಸ್ಚಾರ್ಜ್ ಸಮ್ಮರಿಯಲ್ಲಿ ಮೂರು ವಾರ ಅಥವಾ ಒಂದು ತಿಂಗಳ ನಂತರ ಚಿಕಿತ್ಸೆ ಪಡೆಯಬೇಕು ಎಂದು ನಮೂದಾಗಿರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ, ಸಾಕ್ಷಿ ಮುಂದುವರೆದು ವೈದ್ಯರು ಆ ರೀತಿ ತಿಳಿಸಿದ್ದರು ಎಂದು ನುಡಿಯುತ್ತಾರೆ. ಅದಕ್ಕೆ ಸಂಬಂಧಿಸಿದಂತೆ ವೈದ್ಯರನ್ನು ಸಾಕ್ಷಿದಾರರನ್ನಾಗಿ ಹಾಜರುಪಡಿಸಲು ತೊಂದರೆ ಇರುವುದಿಲ್ಲ.

**3.** ಸುಮಾರು 3 ರಿಂದ 4 ಲಕ್ಷ ರೂ. ವೈದ್ಯಕೀಯ ವೆಚ್ಚವಾಗಿರುತ್ತದೆ. ಅದಕ್ಕೆ ಸಂಬಂಧಿಸಿದಂತೆ ದಾಖಲೆಗಳನ್ನು ನೀವು ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ನೀವು 6 ತಿಂಗಳವರೆಗೆ ವಕೀಲ ವೃತ್ತಿಯನ್ನು ಮಾಡದೆ ಮನೆಯಲ್ಲಿ ವಿಶ್ರಾಂತಿ ತೆಗೆದುಕೊಂಡಿದ್ದ ಬಗ್ಗೆ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿ. ನಿ.ಪಿ.20 ರಲ್ಲಿ 6 ವಾರಗಳ ಕಾಲ ವಿಶ್ರಾಂತಿ ಎಂದು ನಮೂದಿಸಿದ್ದು 6 ತಿಂಗಳ ಕಾಲ ವಿಶ್ರಾಂತಿ ಎಂದು ನಮೂದಿಸಿಲ್ಲ ಎಂದರೆ ಆ ದಾಖಲೆಯನ್ನು ನಾನು ನೋಡಿರುವುದಿಲ್ಲ ಎಂದು ನುಡಿಯುತ್ತಾರೆ.

**4.** ನಾನು 2022 ರಿಂದ ಹಿರಿಯ ವಕೀಲ ವೃತ್ತಿ ಪ್ರಾರಂಭಿಸಿರುತ್ತೇನೆ. ನಿ.ಪಿ.18 ಪ್ರಕರಣಕ್ಕಾಗಿ ಸೃಷ್ಟಿಸಿರುವ ದಾಖಲೆಗಳು ಎಂದರೆ ಸರಿಯಲ್ಲ. ನನ್ನ ವೇತನವನ್ನು ಅಕೌಂಟ್ ಮುಖಾಂತರ ನೀಡುತ್ತಿದ್ದರು. ಪ್ರತಿ ತಿಂಗಳು ನಿಮಗೆ ರೂ.55,000/- ವೇತನವಿತ್ತು ಎಂದು ತೋರಿಸಲು ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ನಿ.ಪಿ.18 ಅನ್ನು ಹೊರತುಪಡಿಸಿ ನಿಮಗೆ ಪ್ರತಿ ತಿಂಗಳು ರೂ.55,000/- ವೇತನ ಪಾವತಿಯಾಗುತ್ತಿತ್ತು ಎಂದು ತೋರಿಸಲು ಬೇರೆ ದಾಖಲೆಗಳನ್ನು ಹಾಜರುಪಡಿಸಿದ್ದೀರಾ ಎಂದರೆ ಹಾಜರುಪಡಿಸಿರುವುದಿಲ್ಲ ಎಂದು ನುಡಿಯುತ್ತಾರೆ. 2008 ನೇ ಇಸವಿಯಿಂದ ನಾನು ವಕೀಲ ವೃತ್ತಿಯನ್ನು

ಪ್ರಾರಂಭಿಸಿರುತ್ತೇನೆ. ನಿಮ್ಮ ಮುಖ್ಯ ವಿಚಾರಣೆಯ ಅಂಶಗಳು ಸುಳ್ಳಿನಿಂದ ಕೂಡಿರುತ್ತವೆ ಎಂದರೆ ಸರಿಯಲ್ಲ. ನಿಮ್ಮ ತಪ್ಪಿನಿಂದ ಅಪಘಾತವಾಗಿರುವ ಕಾರಣ ನೀವು ಪರಿಹಾರ ಪಡೆದುಕೊಳ್ಳಲು ಅರ್ಹರಾಗಿರುವುದಿಲ್ಲ ಎಂದರೆ ಸರಿಯಲ್ಲ. ನಿ.ಪಿ.22 ರಲ್ಲಿ ಅಪಘಾತದ ವೇಳೆಯಲ್ಲಿ ಒಂದನೇ ಎದುರುದಾರರ ಚಾಲನಾ ಪರವಾನಗಿ ಹಾಗೂ ವಾಹನದ ವಿಮಾ ಪಾಲಿಸಿ ಚಾಲ್ತಿಯಲ್ಲಿತ್ತು ಎಂದರೆ ಸರಿ. ಸಾಕ್ಷಿಗೆ ಒಂದನೇ ಎದುರುದಾರರ ಡಿ.ಎಲ್. ನ ನೋಟರೀಕೃತ ಪ್ರತಿಯನ್ನು ಹಾಗೂ ಮೂಲ ಪ್ರತಿಯನ್ನು ತೋರಿಸಲಾಗಿ ಅವುಗಳನ್ನು ಒಪ್ಪಿಕೊಂಡ ಮೇರೆಗೆ ನೋಟರಿಕೃತಪ್ರತಿಯನ್ನು **ನಿ.ಆರ್.1** ಎಂದು ಗುರುತಿಸಲಾಯಿತು.(ಮೂಲ ಪ್ರತಿಯನ್ನು ಒಂದನೇ ಎದುರುದಾರರಿಗೆ ಹಿಂತರುಗಿಸಲಾಯಿತು). ಅಪಘಾತವಾದ ವೇಳೆಯಲ್ಲಿ 1 ನೇ ಎದುರುದಾರರ ವಾಹನಕ್ಕೆ ವಿಮಾ ಪಾಲಿಸಿ ಇತ್ತು ಎಂದರೆ ಸರಿ.

**(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲ್ಪಟ್ಟಿದೆ).**

**(ಓ.ಹೇ.ಕೇ.ಸ.ಇ.)**

**( ಶ್ರೀಮತಿ. ನಿರ್ಮಲ ಎಂ.ಸಿ)**
ಎಸಿಜೆಎಂ ನ್ಯಾಯಾಧೀಶರು
ಲಘು ವ್ಯವಹಾರಗಳ ನ್ಯಾಯಾಲಯ
ಬೆಂಗಳೂರು.